# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎಕ್ಸ್1/ಡ್ರಾ.ಗ್ರೇ.ಪ/ನವೆಂಬರ್-2019/01/2019-20 ದಿನಾಂಕ: 09.09.2019

**-: ಅಧಿಸೂಚನೆ :-**

**ವಿಷಯ:** ನವೆಂಬರ್-2019ರ ಮಾಹೆಯಲ್ಲಿ ನಡೆಯಲಿರುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರಿ ಆದೇಶ ಸಂಖ್ಯೆ:ಇಡಿ.236/ಎಸ್‌ಎಲ್‌ಬಿ/2018 ಬೆಂಗಳೂರು ದಿನಾಂಕ:24.01.2019.

***

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಇತರೆ ಪರೀಕ್ಷೆಗಳ ವಿಭಾಗದಿಂದ ನವೆಂಬರ್-2019ರ ಮಾಹೆಯಲ್ಲಿ ನಡೆಯುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ, ಅನುದಾನರಹಿತ ಶಾಲಾ/ಕಾಲೇಜುಗಳಿಂದ ಹಾಜರಾಗುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದಲ್ಲದೆ ಖಾಸಗಿ ಅಭ್ಯರ್ಥಿಗಳು ಸಹ ಈ ಪರೀಕ್ಷೆಗೆ ಹಾಜರಾಗಲು ಅರ್ಜಿಗಳನ್ನು ಪರೀಕ್ಷಾ ಕೇಂದ್ರದ ಮುಖಾಂತರ ಸಲ್ಲಿಸಬಹುದಾಗಿದೆ. ಸದರಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ತಮ್ಮ ಪರೀಕ್ಷಾ ಕೇಂದ್ರದಲ್ಲಿ ಹಾಜರಾಗುವ ಅರ್ಹ ವಿದ್ಯಾರ್ಥಿಗಳು ಹಾಗೂ ಖಾಸಗಿ ಅಭ್ಯರ್ಥಿಗಳ ವಿವರಗಳನ್ನು ಮಂಡಳಿಯ www.kseeb.kar.nic.in ಜಾಲತಾಣದ School login ಮೂಲಕ Upload ಮಾಡಲು ಸೂಚಿಸಿದೆ. ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ SATS ಸಂಖ್ಯೆ ಲಭ್ಯವಿರುತ್ತದೆ, ಈ ವಿದ್ಯಾರ್ಥಿಗಳನ್ನು ರೆಗ್ಯುಲರ್ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು. SATS ಸಂಖ್ಯೆ ಇಲ್ಲದ ಅಭ್ಯರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.

**ಡ್ರಾಯಿಂಗ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆ:-**

- ಡ್ರಾಯಿಂಗ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳಲು ರೆಗ್ಯುಲರ್ ಹಾಗೂ ಖಾಸಗಿ ಅಭ್ಯರ್ಥಿಗಳು 7ನೇ ತರಗತಿ ಉತ್ತೀರ್ಣರಾಗಿರಬೇಕು.
- ಪ್ರಸ್ತುತ 8, 9, 10ನೇ ತರಗತಿ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ SATS ಸಂಖ್ಯೆ ಹೊಂದಿರುವ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಬಹುದು.
- ಖಾಸಗಿ ಅಭ್ಯರ್ಥಿಗಳು ಸಹ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.
- ಡ್ರಾಯಿಂಗ್ ಗ್ರೇಡ್ ಪರೀಕ್ಷೆಯಲ್ಲಿ ಲೋಯರ್ ಮತ್ತು ಹೈಯರ್ ಎಂಬ ಎರಡು ಪರೀಕ್ಷೆಗಳಿರುತ್ತವೆ. ಅಭ್ಯರ್ಥಿಗಳು ಲೋಯರ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳದೆಯೇ ನೇರವಾಗಿ ಹೈಯರ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳಬಹುದು. ಆದರೆ ಎರಡೂ ಪರೀಕ್ಷೆಗಳನ್ನು ಒಂದೇ ಬಾರಿ ತೆಗೆದುಕೊಳ್ಳಲು ಅವಕಾಶವಿಲ್ಲ.
- ಪರೀಕ್ಷೆಗೆ ಮಂಡಳಿಯಿಂದ ಅನುಮೋದಿಸಲ್ಪಟ್ಟ ಪರೀಕ್ಷಾ ಕೇಂದ್ರಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನೋಂದಾಯಿಸಿಕೊಳ್ಳಲು ಅವಕಾಶವಿದೆ. ಪ್ರತಿ ಕೇಂದ್ರದಲ್ಲೂ ಕನಿಷ್ಠ 100 ಅಭ್ಯರ್ಥಿಗಳಿರಬೇಕು. ಒಂದು ವೇಳೆ 100 ಅಭ್ಯರ್ಥಿಗಳಿಗಿಂತ ಕಡಿಮೆ ಇದ್ದಲ್ಲಿ ಕಳೆದ ಬಾರಿ ಕಳುಹಿಸಿರುವ ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ಪರಿಶೀಲಿಸಿ ಆಯಾ ಶಾಲೆಗೆ ಹತ್ತಿರದ ಪರೀಕ್ಷಾ ಕೇಂದ್ರಕ್ಕೆ ಮಂಡಳಿಯಿಂದಲೇ ಲಗತ್ತಿಸಲಾಗುವುದು.
- ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಜಿಲ್ಲಾ ವ್ಯಾಪ್ತಿಯಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗೆ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಬಹುದು.
- ಈ ಅಧಿಸೂಚನೆಯೊಂದಿಗೆ ಮಂಡಳಿಯಿಂದ ಗುರುತಿಸಲಾಗಿರುವ 241 ಪರೀಕ್ಷಾ ಕೇಂದ್ರಗಳ ಪಟ್ಟಿಯನ್ನು ಲಗತ್ತಿಸಿದ್ದು, ಈ ಪಟ್ಟಿಯನ್ನು ಅವಲೋಕಿಸಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು.

## ಪರೀಕ್ಷಾ ವಿಷಯ ಮತ್ತು ಪರೀಕ್ಷಾ ಶುಲ್ಕ ವಿವರ

| ಕ್ರ ಸಂ | ಪರೀಕ್ಷಾ ವಿಷಯ | ವಿಷಯ ಸಂಕೇತ | ಪರೀಕ್ಷಾ ಶುಲ್ಕ ವಿವರ | | ಒಟ್ಟು ಶುಲ್ಕ |
|---|---|---|---|---|---|
| | | | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | |
| 01 | ಡ್ರಾಯಿಂಗ್ ಗ್ರೇಡ್ ಲೋಯರ್ | ಎಲ್ | 312–00 | 20–00 | 332–00 |
| 02 | ಡ್ರಾಯಿಂಗ್ ಗ್ರೇಡ್ ಹೈಯರ್ | ಹೆಚ್ | 390–00 | 20–00 | 410–00 |

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದ್ದು, ಅರ್ಜಿ ಶುಲ್ಕ ಒಟ್ಟು ರೂ.20–00ಗಳನ್ನು ಪಾವತಿಸಬೇಕಾಗಿರುತ್ತದೆ.

ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರು ನೀಡಿರುವ ಜಾತಿ/ಆದಾಯ ಪ್ರಮಾಣಪತ್ರದ ಜೆರಾಕ್ಸ್ ಪ್ರತಿಯನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಪಡೆದು ದೃಢೀಕರಿಸಿ, ತಮ್ಮ ಅಧೀನದಲ್ಲಿಯೇ ಸಂರಕ್ಷಿಸಲು ತಿಳಿಸಿದೆ. ಯಾವುದೇ ಕಾರಣಕ್ಕೂ ಜಾತಿ/ಆದಾಯ ಪ್ರಮಾಣಪತ್ರಗಳನ್ನು ಮಂಡಳಿಗೆ ಕಳುಹಿಸುವಂತಿಲ್ಲ.

## ನೆಫ್ಟ್ ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ

| ಕ್ರ ಸಂ | ವಿವರ | ನಿಗಧಿಪಡಿಸಿರುವ ದಿನಾಂಕ |
|---|---|---|
| 01 | ಮಂಡಳಿ ಜಾಲತಾಣದ ಶಾಲಾ ಲಾಗಿನ್ ಮೂಲಕ ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು **ಪ್ರಾರಂಭದ ದಿನಾಂಕ** | 18.09.2019 |
| 02 | ಮಂಡಳಿ ಜಾಲತಾಣದ ಶಾಲಾ ಲಾಗಿನ್ ಮೂಲಕ ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲು **ಅಂತಿಮ ದಿನಾಂಕ** | 05.10.2019 |
| 03 | ಮಂಡಳಿ ಜಾಲತಾಣದ ಶಾಲಾ ಲಾಗಿನ್ ಮೂಲಕ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಚಲನ್ ಮುದ್ರಿಸಿಕೊಂಡು ನೆಫ್ಟ್ ಮೂಲಕ **ಬ್ಯಾಂಕ್‌ಗೆ ಜಮಾ ಮಾಡಲು** ನಿಗಧಿಪಡಿಸಿದ ದಿನಾಂಕ | 09.10.2019ರಿಂದ 11.10.2019ರವರೆಗೆ |
| 04 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಮಂಡಳಿಗೆ ಕಳುಹಿಸಲು **ಕೊನೆಯ ದಿನಾಂಕ** | 16.10.2019 |

## ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

ಅಭ್ಯರ್ಥಿಗಳ ಪರೀಕ್ಷಾ ನೋಂದಣಿಯನ್ನು ಮಂಡಳಿಯ ಜಾಲತಾಣದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಲಾಗಿನ್ ಆಗುವ School login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕೇಂದ್ರವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸದರಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ನಿಗದಿತ ಅವಧಿಯಲ್ಲಿ ನೆಫ್ಟ್ ಮೂಲಕ ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು.

ಪರೀಕ್ಷಾ ಶುಲ್ಕವನ್ನು ಪ್ರಸಕ್ತ ಸಾಲಿನಲ್ಲಿ ಕಡ್ಡಾಯವಾಗಿ ಶಾಲಾ ಲಾಗಿನ್‌ನಲ್ಲಿ ನೆಫ್ಟ್ ಚಲನ್ ಜನರೇಟ್ ಮಾಡಿಕೊಂಡು ಬ್ಯಾಂಕ್ ಮುಖಾಂತರ ಪಾವತಿಸಬೇಕಾಗಿರುತ್ತದೆ. ಆನ್‌ಲೈನ್ ಚಲನ್ ಹೊರತುಪಡಿಸಿ ಮತ್ಯಾವುದೇ ರೀತಿಯ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮತ್ತು ಅರ್ಜಿ ಶುಲ್ಕವನ್ನು ಒಟ್ಟಿಗೆ ಸೇರಿಸಿ ಪಾವತಿ ಮಾಡಬೇಕಾಗಿರುತ್ತದೆ. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಡ್ರಾಯಿಂಗ್ ಗ್ರೇಡ್ ಪರೀಕ್ಷಾ ಶುಲ್ಕದಲ್ಲಿ ಪ್ರತಿ ವಿದ್ಯಾರ್ಥಿಗೆ ಪರೀಕ್ಷಾ ಕಾರ್ಯದ ವೆಚ್ಚಕ್ಕಾಗಿ ನಿಗದಿ ಪಡಿಸಿರುವ ಅರ್ಜಿ ಶುಲ್ಕ ರೂ.20–00ಗಳಲ್ಲಿ ರೂ.10/–ಗಳನ್ನು ಪರೀಕ್ಷಾ ಕಾರ್ಯಕ್ಕಾಗಿ ಶಾಲಾ

ಹಂತದಲ್ಲಿ ಉಳಿಸಿಕೊಂಡು ಉಳಿದ ಮೊತ್ತವನ್ನು ಮಂಡಳಿಗೆ ಪಾವತಿಸುವುದು. ಶಾಲೆಯಲ್ಲಿ ಉಳಿಸಿಕೊಂಡ ಮೊತ್ತವನ್ನು ಮಂಡಳಿಯ ಜಾಲತಾಣದಲ್ಲಿ ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಹಾಗೂ ನಾಮಾಯಾದಿ ಪಟ್ಟಿ, ಪ್ರವೇಶಪತ್ರ, ಸಿ.ಎನ್.ಆರ್, ಎ.ಎಂ.ಎಲ್. ಇತ್ಯಾದಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಬಳಸುವುದು.

**ವಿಭಿನ್ನ ಸಾಮರ್ಥ್ಯವುಳ್ಳ (Differently abled) ಮಕ್ಕಳಿಗೆ ನೀಡುವ ವಿನಾಯಿತಿ.**

ಕಿವುಡ, ಮೂಕ ಅಭ್ಯರ್ಥಿಗಳು (ಲೋಯರ್ ಮತ್ತು ಹೈಯರ್) ರೇಖಾನಕ್ಷೆಗೆ (Geometrical Drawing) ಬದಲಾಗಿ ಈ ಕೆಳಗೆ ತಿಳಿಸಿದಂತೆ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ.

ಲೋಯರ್ ಗ್ರೇಡ್ :- ನಿಗದಿಪಡಿಸಿದ ಚಿತ್ರವನ್ನು ಸೀಸದ ಕಡ್ಡಿಯಿಂದ ಬಿಡಿಸುವುದು. (Geometrical Drawing).

ಹೈಯರ್ ಗ್ರೇಡ್ :- ನಿಗದಿಪಡಿಸಿದ ಚಿತ್ರವನ್ನು ಸೀಸದ ಕಡ್ಡಿಯಿಂದ ಬಿಡಿಸುವುದು. (Geometrical Drawing, Lettering and Scale Drawing).

**ಅರ್ಜಿಗಳನ್ನು ಸಲ್ಲಿಸಲು ಕೇಂದ್ರದ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:-**

1. ನವೆಂಬರ್-2019ರ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ನೋಂದಣಿ ಮಾಹಿತಿಯನ್ನು ಮಂಡಳಿ ಜಾಲತಾಣದ ಶಾಲಾ ಲಾಗಿನ್ ಮುಖಾಂತರ ಅಪ್‌ಲೋಡ್ ಮಾಡುವುದು.
2. 8 ರಿಂದ 12ನೇ ತರಗತಿಯವರೆಗೆ ಮುಖ್ಯವಾಹಿನಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳ SATS ಸಂಖ್ಯೆಯ ಮೂಲಕ (SATS NUMBER) ಅರ್ಜಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ. ಅರ್ಜಿಯಲ್ಲಿ SATS ಸಂಖ್ಯೆಯನ್ನು ನಮೂದಿಸಿದಾಗ SATS ಮಾಹಿತಿಗಳು AUTO FETCH ಆಗುತ್ತವೆ. ಉಳಿದ ಮಾಹಿತಿಗಳನ್ನು ಕೇಂದ್ರದ ಮುಖ್ಯಸ್ಥರು ಭರ್ತಿ ಮಾಡುವುದು.
3. ಖಾಸಗಿ ಅಭ್ಯರ್ಥಿಗಳು ಶಾಲಾ ಲಾಗಿನ್‌ನಲ್ಲಿ NON SATS ಮೂಲಕ ಅರ್ಜಿಗಳನ್ನು ಸಲ್ಲಿಸುವುದು. ಸದರಿ ಅಭ್ಯರ್ಥಿಗಳ ಎಲ್ಲಾ ಮಾಹಿತಿಗಳನ್ನು ಕೇಂದ್ರದ ಮುಖ್ಯಸ್ಥರು ಸಂಬಂಧಿಸಿದ ಕಾಲಂಗಳಲ್ಲಿ ತುಂಬುವುದು.
4. ಖಾಸಗಿ ಅಭ್ಯರ್ಥಿಗಳು ಡ್ರಾಯಿಂಗ್ ಗ್ರೇಡ್ ಪರೀಕ್ಷೆ ತೆಗೆದುಕೊಳ್ಳಲು ಕಡ್ಡಾಯವಾಗಿ 7ನೇ ತರಗತಿ ಉತ್ತೀರ್ಣರಾಗಿರಬೇಕು. ಸಂಬಂಧಿಸಿದ ದಾಖಲೆಗಳನ್ನು ಕೇಂದ್ರದ ಮುಖ್ಯಸ್ಥರು ಪರಿಶೀಲಿಸಿ ತಮ್ಮ ಹಂತದಲ್ಲಿಯೇ ಸಂರಕ್ಷಿಸಿಕೊಳ್ಳುವುದು.
5. **ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಶಾಲಾ ಲಾಗಿನ್ ಮೂಲಕ ಸಲ್ಲಿಸುವ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.**
6. Tagged ಶಾಲೆಯ ಮುಖ್ಯಸ್ಥರು ಮಂಡಳಿಯಿಂದ ನಿಗದಿಪಡಿಸಿರುವ ಪರೀಕ್ಷಾ ಕೇಂದ್ರಗಳಲ್ಲಿ ತಮಗೆ ಹತ್ತಿರವಿರುವ ಪರೀಕ್ಷಾ ಕೇಂದ್ರದ ಮುಖಾಂತರ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಮಾಡಿಕೊಡುವುದು.
7. ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕದ ನಂತರ ಅರ್ಜಿಯಲ್ಲಿ ಅಭ್ಯರ್ಥಿಗಳ ಮಾಹಿತಿಯ ತಿದ್ದುಪಡಿಗಾಗಿ ಮಂಡಳಿ ನಿಗಧಿಪಡಿಸಿದ ಅವಧಿಯಲ್ಲಿ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.

- SATS ಸಂಖ್ಯೆ ಹೊಂದಿರುವ ಅಭ್ಯರ್ಥಿಗಳಾಗಿದ್ದಲ್ಲಿ SATS ಮೂಲಕ FETCH ಆದ ಮಾಹಿತಿಗಳನ್ನು ನೇರವಾಗಿ ಮಂಡಳಿ ಜಾಲತಾಣದಲ್ಲಿ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಅಂತಹ ತಿದ್ದುಪಡಿಗಳನ್ನು ಅಭ್ಯರ್ಥಿಗಳು ವ್ಯಾಸಂಗ ಮಾಡುತ್ತಿರುವ ಮೂಲ ಶಾಲೆಯ SATS ಲಾಗಿನ್‌ನಲ್ಲಿ ಅಗತ್ಯ ದಾಖಲೆಗಳೊಂದಿಗೆ ನಿಯಮಾನುಸಾರ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ.
- SATS ಮೂಲಕ FETCH ಆಗದ ಉಳಿದ ಮಾಹಿತಿಗಳನ್ನು ಮಂಡಳಿ ಜಾಲತಾಣದ ಶಾಲಾ ಲಾಗಿನ್‌ನಲ್ಲಿ ನಿಗಧಿತ ಅವಧಿಯೊಳಗೆ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.
- ಖಾಸಗಿ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ತಿದ್ದುಪಡಿ ಬಯಸಿದ್ದಲ್ಲಿ ನಿಗದಿತ ಅವಧಿಯಲ್ಲಿ ಪೂರಕ ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಸಿಕೊಂಡು ಅಗತ್ಯ ತಿದ್ದುಪಡಿಯನ್ನು ಮಾಡುವುದು.

- **ಅಂತಿಮ ದಿನಾಂಕದ ನಂತರ ತಿದ್ದುಪಡಿಗಳಿಗೆ ಅವಕಾಶವಿರುವುದಿಲ್ಲ.**
- ಅಭ್ಯರ್ಥಿಗಳು ಅರ್ಜಿಯನ್ನು ನೋಂದಾಯಿಸಿದ ಪರೀಕ್ಷಾ ಕೇಂದ್ರದ ಲಾಗಿನ್‌ಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ನೀಡಲಾಗುವುದು. ಪರೀಕ್ಷೆಗೆ ನೋಂದಾಯಿಸಿದ ಅಭ್ಯರ್ಥಿಗಳು ಸದರಿ ಪರೀಕ್ಷಾ ಕೇಂದ್ರದಿಂದಲೇ ಪ್ರವೇಶ ಪತ್ರಗಳನ್ನು ಪಡೆಯುವುದು.

**ನವೆಂಬರ್-2019ರ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಈ ಕೆಳಕಂಡ ದಾಖಲೆಗಳನ್ನು ಕೇಂದ್ರದ ಮುಖ್ಯಸ್ಥರು ದಿನಾಂಕ:16.10.2019ರೊಳಗೆ ಸಲ್ಲಿಸುವುದು ಕಡ್ಡಾಯ.**

1. ಮುಖಪುಟ (Covering letter)
2. ಶುಲ್ಕ ಪಾವತಿಸಿದ ಮೂಲ ನೆಫ್ಟ್ ಚಲನ್
3. ನಾಮಾಂಕಿತ ಪಟ್ಟಿ (Nominal Roll) (ಲೋಯರ್ ಮತ್ತು ಹೈಯರ್ ಪ್ರತ್ಯೇಕ)

ನವೆಂಬರ್-2019ರ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಮೇಲ್ಕಂಡ ದಾಖಲೆಗಳನ್ನು ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ **ದಿನಾಂಕ:16.10.2019ರೊಳಗಾಗಿ** ತಲುಪಿಸುವುದು.

ಶ್ರೀ ಮಹಾಂತೇಶ್ ಕಂಠಿ,
ಸಹಾಯಕ ನಿರ್ದೇಶಕರು ಮತ್ತು ಶಾಖಾಧಿಕಾರಿಗಳು,
ಚಿತ್ರಕಲಾ ವಿಭಾಗ, 4ನೇ ಮಹಡಿ,
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03
ಮೊಬೈಲ್ ಸಂಖ್ಯೆ: **9902249906**
ಮಂಡಳಿಯ ದೂರವಾಣಿ ಸಂಖ್ಯೆ:**080-23345494**
ಇ-ಮೇಲ್ ವಿಳಾಸ:**dpioekseeb@gmail.com**

**ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಮಂಡಳಿಯ ಜಾಲತಾಣದಲ್ಲಿ ನೋಡುವುದು.**

**www.kseeb.kar.nic.in**

**ಸೂಚನೆ:- ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ Flow chart ಹಾಗೂ User Manual ಶಾಲಾ ಲಾಗಿನ್‌ನಲ್ಲಿ ಲಭ್ಯವಿರುತ್ತದೆ. ಅದರಂತೆ ಕ್ರಮವಹಿಸಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ Upload ಮಾಡುವುದು.**

(ವಿ.ಸುಮಂಗಲ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಯನ್ನು:-**

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಹೊಸಕೆರೆಹಳ್ಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ, ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ.
5. ಕೇಂದ್ರಗಳ ಎಲ್ಲಾ ಮುಖ್ಯ ಅಧೀಕ್ಷಕರಿಗೆ, ಸೂಕ್ತ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು (ಡ್ರಾಯಿಂಗ್ ಗ್ರೇಡ್ ಪರೀಕ್ಷೆ) ಆಯುಕ್ತರ ಕಛೇರಿ, ಬೆಂಗಳೂರು, ವಿಭಾಗೀಯ ಆಯುಕ್ತರ ಕಛೇರಿ, ಧಾರವಾಡ, ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
7. ವಿಭಾಗೀಯ ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಕಲಬುರಗಿ ರವರಿಗೆ ಅಗತ್ಯ ಕ್ರಮಕ್ಕಾಗಿ.
8. ಶಾಖಾಧಿಕಾರಿಗಳು, ಗಣಕ ಶಾಖೆ.
9. ಕಛೇರಿ ಪ್ರತಿ.

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎಕ್ಸ್1/ಡ್ರಾ.ಗ್ರೇ.ಪ/ನವೆಂಬರ್-2019/01/2019-20 ದಿನಾಂಕ: 18.09.2019

**ಜ್ಞಾಪನ**

**ವಿಷಯ:** ನವೆಂಬರ್-2019ರ ಮಾಹೆಯಲ್ಲಿ ನಡೆಯಲಿರುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:** 1) ಅಧಿಸೂಚನೆ ಸಂಖ್ಯೆ:ಎಕ್ಸ್1/ಡ್ರಾ.ಗ್ರೇ.ಪ/ನವೆಂಬರ್-2019/01/2019-20 ದಿನಾಂಕ:09.09.2019.

2) ಸರ್ಕಾರಿ ಆದೇಶ ಸಂಖ್ಯೆ:ಇಡಿ.236/ಎಸ್ಎಲ್‌ಬಿ/2018 ಬೆಂಗಳೂರು ದಿನಾಂಕ:16.09.2019.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನವೆಂಬರ್-2019ರ ಮಾಹೆಯಲ್ಲಿ ನಡೆಯಲಿರುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಸಂಬಂಧ ಉಲ್ಲೇಖ(1)ರನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಉಲ್ಲೇಖ(2)ರ ಸರ್ಕಾರದ ಆದೇಶದಂತೆ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯ ಪರೀಕ್ಷಾ ಶುಲ್ಕವನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಆದುದರಿಂದ ಉಲ್ಲೇಖ(1)ರ ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ಪರೀಕ್ಷಾ ಶುಲ್ಕದ ವಿವರವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

**ಪರೀಕ್ಷಾ ವಿಷಯ ಮತ್ತು ಪರೀಕ್ಷಾ ಶುಲ್ಕ ವಿವರ**

| ಕ್ರ. ಸಂ | ಪರೀಕ್ಷಾ ವಿಷಯ | ವಿಷಯ ಸಂಕೇತ | ಪರೀಕ್ಷಾ ಶುಲ್ಕ ವಿವರ | | ಒಟ್ಟು ಶುಲ್ಕ |
|---|---|---|---|---|---|
| | | | ಪರೀಕ್ಷಾ ಶುಲ್ಕ | ಅರ್ಜಿ ಶುಲ್ಕ | |
| 01 | ಡ್ರಾಯಿಂಗ್ ಗ್ರೇಡ್ ಲೋಯರ್ | ಎಲ್ | 200-00 | 20-00 | 220-00 |
| 02 | ಡ್ರಾಯಿಂಗ್ ಗ್ರೇಡ್ ಹೈಯರ್ | ಹೆಚ್ | 200-00 | 20-00 | 220-00 |

ಮೇಲೆ ತಿಳಿಸಿರುವಂತೆ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಸ್ವೀಕರಿಸುವಂತೆ ತಿಳಿಸಿದೆ.

(ವಿ. ಸುಮಂಗಲ) 18/9
ನಿರ್ದೇಶಕರು
(ಇತರೆ ಪರೀಕ್ಷೆಗಳು)

ಗೆ,

1. ರಾಜ್ಯದ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯಅಧೀಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:-**

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಹೊಸಕೆರೆಹಳ್ಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ವಿಭಾಗೀಯ ಸಹನಿರ್ದೇಶಕರು ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ ವಿಭಾಗದವರಿಗೆ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ, ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸೂಕ್ತ ಕ್ರಮಕ್ಕಾಗಿ.
6. ಹಿರಿಯ ಸಹಾಯಕ ನಿರ್ದೇಶಕರು (ಚಿತ್ರಕಲೆ) ಆಯುಕ್ತರ ಕಛೇರಿ, ಬೆಂಗಳೂರು, ವಿಭಾಗೀಯ ಆಯುಕ್ತರ ಕಛೇರಿ, ಧಾರವಾಡ, ಕಲಬುರಗಿ ರವರಿಗೆ ಸೂಕ್ತ ಕ್ರಮಕ್ಕಾಗಿ.
7. ವಿಭಾಗೀಯ ಹಿರಿಯ ಚಿತ್ರಕಲಾ ವಿಷಯ ಪರಿವೀಕ್ಷಕರು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ.
8. ಶಾಖಾಧಿಕಾರಿಗಳು, ಗಣಕ ಶಾಖೆ.
9. ಕಛೇರಿ ಪ್ರತಿ.